5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ಆರೋಪಿಯನ್ನು ವಿ ಸಿ ಮೂಲಕ ಹಾಜರು ಪಡಿಸಲಾಗಿದೆ.

ದಿನಾಂಕ ಃ 03.11.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 15 ಪಿ. ಡಬ್ಲ್ಯೂ:13

| | |
|---|---|
| ಸಾಕ್ಷಿದಾರರ ಹೆಸರು | ಡಾ. ಸಾಯಿಕುಮಾರ್ ವಿ |
| ತಂದೆಯ ಹೆಸರು | ಲೇಟ್ ಆರ್. ವೆಂಕಟಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ, ಕೆ ಆರ್ ಆಸ್ಪತ್ರೆ, ತುರ್ತು ಚಿಕಿತ್ಸಾ ವಿಭಾಗ. |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನವೆಂಬರ್ 2011 ರಿಂದ ನಾನು ಮೈಸೂರು ಕೆ ಆರ್ ಆಸ್ಪತ್ರೆ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 03.08.2022 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ದಲ್ಲಿ ಇದ್ದಾಗ, ಸಿದ್ದರಾಜು ಹಾಗೂ ಮಹದೇವಮ್ಮ ರವರು, ಸುಟ್ಟ ಗಾಯಗಳ ಹಿನ್ನೆಲೆಯಲ್ಲಿ, ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ನಮ್ಮ ಕೆ ಆರ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬಂದಿರುತ್ತಾರೆ. ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರು, ಅದೇ ದಿನ, ಸುಮಾರು ಸಂಜೆ 7.00 ಗಂಟೆ ಸಮಯದಲ್ಲಿ ಜೋಗಪ್ಪ ಅಲಿಯಾಸ್ ಸಿದ್ದೇಗೌಡ ಎನ್ನುವವರು ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ. ಸದರಿಯವರ ಹೇಳಿಕೆಯನ್ನು ನಾನು ಎಂ ಎಲ್ ಸಿ ವಹಿಯಲ್ಲಿ ದಾಖಲು ಮಾಡಿಕೊಂಡು, ಪೊಲೀಸರಿಗೆ ಮಾಹಿತಿಯನ್ನು ಕಳುಹಿರುತ್ತೇನೆ. ಸಾಕ್ಷಿಯು ಸದರಿ ಎಂ ಎಲ್ ಸಿ extract ಪುಟ ನಂಃ 187 ಮತ್ತು 188 ರ ದೃಡೀಕೃತ ಪ್ರತಿ ಹಾಗೂ ಮೆಮೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತುರ್ತು ಚಿಕಿತ್ಸಾ ವಿಭಾಗದ ಮೂಲ ಎಂ ಎಲ್ ಸಿ ರಿಜಿಸ್ಟರ್

ನ್ನು ಹಾಜರು ಪಡಿಸಿದ್ದು, ಸದರಿ ರಿಜಿಸ್ಟರಿನ ಪುಟ ನಂಃ 187 ಮತ್ತು 188 ನ್ನು ದೃಡೀಕೃತ ಪ್ರತಿಯೊಂದಿಗೆ ತಾಳೆ ಮಾಡಿ ಸದರಿ ಪುಟಗಳ ದೃಡಿಕೃತ ಪ್ರತಿ ಎಂದು ಖಚಿತ ಪಡಿಸಿಕೊಳ್ಳಲಾಯಿತು. ಸದರಿ ಮೂಲ ರಿಜಿಸ್ಟರಿನ ಎಂ ಎಲ್ ಸಿ extract ಪುಟ ನಂಃ 187 ಮತ್ತು 188 ನ್ನು ಒಟ್ಟಾಗಿ ನಿಪಿ.28 ಎಂದು ಗುರುತಿಸಿ, ಸದರಿ ಮೂಲ ರಿಜಿಸ್ಟರನ್ನು ಸಾಕ್ಷಿಗೆ ಹಿಂದಿರುಗಿಸಲಾಗಿದೆ. ಸದರಿ ಎಂ ಎಲ್ ಸಿ extract ಪುಟ ನಂಃ 187 ಮತ್ತು 188 ರ ದೃಡೀಕೃತ ಪ್ರತಿಗಳನ್ನು ಒಟ್ಟಾಗಿ ನಿಪಿ.29 ಎಂದು, ನಿಪಿ.29 ರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.29(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮೆಮೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.30 ಎಂದು, ನಿಪಿ.30 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು, chief defence counsel ರವರಿಂದ ಃ**

3. ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಬಗ್ಗೆ ಸದರಿ ಆಸ್ಪತ್ರೆಯ reference ಪತ್ರ ಇರುತ್ತದೆ, ಅದನ್ನು ಮೂಲ ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ಇಟ್ಟಿರುತ್ತೇನೆ. ಸದರಿ ಮೂಲ ಎಂ.ಎಲ್.ಸಿ ರಿಜಿಸ್ಟರ್ ಪುಟ ನಂಃ 187 ರಲ್ಲಿ attach ಮಾಡಿ ಇಟ್ಟಿರುವ ದಾಖಲಾತಿಗಳನ್ನು ಸಾಕ್ಷಿಯು ತೋರಿಸಿ, ಸದರಿ ದಾಖಲಾತಿಗಳಾದ ಹೊರರೋಗಿ ಚೀಟಿಗಳು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಬಂದ ದಾಖಲಾತಿಗಳಾಗಿರುತ್ತವೆ ಎಂದು ಹೇಳಿರುತ್ತಾರೆ. ಸದರಿ ಹೊರ ರೋಗಿ ಚೀಟಿಯಲ್ಲಿ ಸಿದ್ದರಾಜು ಮತ್ತು ಮಹದೇವಮ್ಮ ರವರ ಪಲ್ಸ್ ರೇಟ್ ಬಗ್ಗೆ ಇರುವುದಿಲ್ಲ ಎಂದರೆ ಸಾಕ್ಷಿಯು, ಮಳವಳ್ಳಿ ಸರ್ಕಾರಿ ಆಸ್ಪತ್ರೆಯ ಕೇಸ್ ಶೀಟ್ ನ್ನು ನೋಡಬೇಕು ಎಂದು ನುಡಿಯುತ್ತಾರೆ.

4. ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರನ್ನು ಅವರ ಸಂಬಂಧಿಕರಾದ ನಾಗಮ್ಮ ರವರು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರ ಪಲ್ಸ್ ರೇಟ್ ಬಗ್ಗೆ ನಮ್ಮ ಆಸ್ಪತ್ರೆಯ ಕೇಸ್ ಶೀಟಿನಲ್ಲಿ ದಾಖಲಾಗಿರುತ್ತದೆ. ನಾನು ನಾಗಮ್ಮ ರವರಿಂದ ಇತಿಹಾಸವನ್ನು ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು, ಸಿದ್ದರಾಜು ರವರಿಂದ ಇತಿಹಾಸವನ್ನು ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮಹದೇವಮ್ಮ

ಹಾಗೂ ಸಿದ್ದರಾಜುರವರು ಅರೆಪ್ರಜ್ಞಾವಸ್ತೆಯಲ್ಲಿ ಇದ್ದರು ಹಾಗೂ ನಾಗಮ್ಮ ರವರ ಹೇಳಿಕೆಯ ಮೇರೆಗೆ ಇತಿಹಾಸವನ್ನು ಎಂ.ಎಲ್.ಸಿ ರಿಜಿಸ್ಟರಿನಲ್ಲಿ ಬರೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ಮಹದೇವಮ್ಮ ರವರ ಪ್ರಜ್ಞಾವಸ್ತೆಯ ಬಗ್ಗೆ ಒಳರೋಗಿ ದಾಖಾಲತಿಗಳಲ್ಲಿ ನಮೂದು ಇರುತ್ತದೆ ಸಿದ್ದರಾಜು ರವರ ಹೇಳಿಕೆಯ ಮೇರೆಗೆ ಇತಿಹಾಸವನ್ನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಎಂ ಎಲ್ ಸಿ ರಿಜಿಸ್ಟರಿನ ಪುಟ ನಂಃ 188 ರಲ್ಲಿ ಇರುವ ಎಡ ಹೆಬ್ಬೆಟ್ಟಿನ ಗುರುತು ಮಹದೇವಮ್ಮರದ್ದು ಆಗಿರುತ್ತದೆ. ಸದರಿ ಎಂ ಎಲ್ ಸಿ ರಿಜಿಸ್ಟರಿನ ಪುಟ ನಂಃ 187 ರಲ್ಲಿ ಸದರಿ ಸಿದ್ದರಾಜು ರವರ ಎಡ ಹೆಬ್ಬೆಟ್ಟಿನ ಗುರುತು ಇರುತ್ತದೆ. ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರ ಸಹಿಗಳನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ನಾವು ರೋಗಿಗಳ ಹೆಬ್ಬೆಟ್ಟಿನ ಗುರುತನ್ನು ಪಡೆಯುತ್ತೇವೆ ಎಂದು ನುಡಿಯುತ್ತಾರೆ. ಅಕಸ್ಮಿಕ ಬೆಂಕಿ ಅವಘಡದಿಂದ ಸದರಿ ಸಿದ್ದರಾಜು ಮತ್ತು ಮಹದೇವಮ್ಮ ರವರು ಬೆಂಕಿ ಆಘಾತಕ್ಕೆ ಒಳಗಾಗಿದ್ದರೂ ಸಹ ನಾಗಮ್ಮ ರವರ ಸುಳ್ಳು ಮಾಹಿತಿಯ ಆಧಾರದ ಮೇರೆಗೆ ಇತಿಹಾಸವನ್ನು ಎಂ ಎಲ್ ಸಿ ರಿಜಿಸ್ಟರಿನಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.